
## ಸೈತಾನನ ಸರಕು



ಐದು ಕತ್ತೆಗಳು ಭಾರಹೊತ್ತು ಕುಂಟುತ್ತ ಸಾಗುತ್ತಿದ್ದವು. ಅಷ್ಟೊಂದು ಸರಕು ವ್ಯಾಪಾರಕ್ಕೆ ಹೋಗುತ್ತಿದುದರಿಂದ ತುಂಬ ಭಾರವನ್ನು ಹೊತ್ತಿದ್ದವು ಕತ್ತೆಗಳು. ಅದನ್ನು ನೋಡಿ ಕರುಣಾಳು ಏಸುವು ಕತ್ತೆಗಳ ಒಡೆಯನನ್ನು ಕೇಳಿದ, " ಇಷ್ಟೊಂದು ಭಾರದ ಗಂಟು ಹೊರಸುತ್ತಿದ್ದೀಯೇ, ಯಾವ ಸ್ವತ್ತು ಇದು ?" ಎಂದು. ಅದಕ್ಕೆ ಆ ವ್ಯಾಪಾರಿ ಹೇಳಿದ, " ಇವೆಲ್ಲ ಮಾನವನಿಗೆ ಉಪಯೋಗಕರವಾದ ವಸ್ತುಗಳು. ಇದನ್ನು ಸಂತೆಗೆ ಒಯ್ದು ಜನರಿಗೆ ಮಾರಬೇಕಾಗಿದೆ" ಎಂದ. ಅನಂತರ ಆನಂದದಿಂದ ಆ ವಸ್ತುಗಳ ವಿವರಗಳನ್ನು ಹೇಳತೊಡಗಿದ : "ಒಂದನೆಯ ಕತ್ತೆಯ ಬೆನ್ನಿನಲ್ಲಿ ರಾಜಕಾರಣಿಗಳಿಗೆ ಉಪಯುಕ್ತವಾದ ಅತ್ಯಾಚಾರದ ಗಂಟು ಇದೆ. ಅದು ಬಹಳ ಬೆಲೆ ಬಾಳುವಂತಹುದು. ಈ ಕತ್ತೆಯ ಮೇಲಿರುವುದು ಅಹಂಕಾರದ ಕಟ್ಟು, ಅದು ಸಂಸಾರಿಗನಿಗೆ ಉಪಯುಕ್ತವಾದುದು. ಇದೋ ಹೊಟ್ಟೆಕಿಚ್ಚು, ಜ್ಞಾನಿಗಳಿಗೆ ಬೇಕಾದದ್ದು. ನಾಲ್ಕನೆಯ ಕತ್ತೆಯ ಮೇಲಿರುವುದು ಅಪ್ರಮಾಣಿಕತೆ. ಅದು ವ್ಯಾಪಾರಿಗಳಿಗೆ ಬೇಕು. ಇಲ್ಲಿ ಈ ಐದನೆಯ ಕತ್ತೆಯ ಮೇಲೆ ಮಹಿಳೆಯರಿಗೆ ಬೇಕಾದ ಗಂಟು ಇದೆ. ಇದರಲ್ಲಿ ಛಲ, ಕಪಟ ತುಂಬಿದೆ. ಹೀಗೆ ಮಾನವನಿಗೆ ಅಗತ್ಯವಾದ ಎಲ್ಲ ಬೇಡಿಕೆಗಳನ್ನು ಪೂರೈಸುವವನು ನಾನು. ನನ್ನ ಹೆಸರು ಸೈತಾನ." ಅವನ ಮಾತನ್ನು ಕೇಳಿ ಕಳವಳಗೊಂಡ ಏಸುವು ಮಂಡಿಯೂರಿ ಭಗವಂತನನ್ನು ಬೇಡಿಕೊಂಡ, "ದೇವನೇ, ಈ ಮಾನವಜಾತಿಗೆ ಸದ್ಬುದ್ಧಿ ನೀಡು ತಂದೇ" ಎಂದು.

ವಿ|ಪ್ರ